ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 25 ಚಾ ಸಾ 44

ಹೆಸರುಃ ಶಂಕರ್

ತಂದೆಯ ಹೆಸರುಃ ಸುಕ್ ಲಾಲ್

ವಯಸ್ಸುಃ 47 ವರ್ಷ

ಉದ್ಯೋಗಃ ಪ್ಲಾಸ್ಟಿಕ್ ಹೂಗಳ ವ್ಯಾಪಾರ

ವಾಸಃ ಬಜಾರ್ ಲೈನ್, ಕೆ ಆರ್ ಸಾಗರ.

ದಿಃ 05.10.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನಗೆ ಗಂಗಾರಾಮು ಮತ್ತು ಗಣೇಶ ಗೊತ್ತು. ಅವರು ನನ್ನ ಪಕ್ಕದ ಮನೆಯ ನಿವಾಸಿಗಳು .

2. ಸುಮಾರು 2 ವರುಷ 8 ತಿಂಗಳ ಹಿಂದೆ ಈ ಪ್ರಕರಣದ ಸಾಕ್ಷಿ ಲಕ್ಷ್ಮಿ ಮತ್ತು ಸಾಕ್ಷಿ 4 ಸೀತಾರವರು ಗಂಗಾರಾಮುನ ಮನೆಯ ಬಾಗಿಲನ್ನು ತೆಗೆದಿಲ್ಲ ಎಂದು ಹೇಳಿ ಗಂಗಾರಾಮುವಿನ ಮನೆಗೆ ಹೋಗಿದ್ದರು . ಆಗ

ಅಲ್ಲಿ ಗಂಗಾರಾಮುವಿನ ಹೆಂಡತಿ ಲಕ್ಷ್ಮಿ ಮತ್ತು ಆ ಮನೆಯಲ್ಲಿದ್ದ 4 ಮಕ್ಕಳನ್ನು ಕೊಲೆ ಮಾಡಲಾಗಿದೆ ಎಂಬ ವಿಚಾರ ಅವರಿಗೆ ಗೊತ್ತಾಯಿತು. ಆ ಮನೆಯಿಂದ ಶಬ್ದ ಬಂದಾಗ ನಾನು ಮನೆಗೆ ಹೋಗಿ ನೋಡಿದಾಗ ಲಕ್ಷ್ಮಿ ಮತ್ತು ಆ ಮನೆಯಲ್ಲಿದ್ದ ನಾಲ್ಕು ಮಕ್ಕಳ ಕೊಲೆಯಾಗಿತ್ತು.

3. ಸ್ಥಳದಲ್ಲಿದ್ದ ಲಕ್ಷ್ಮಿ ಮತ್ತು 4 ಜನ ಮಕ್ಕಳ ಶವಗಳನ್ನು ಪರೀಕ್ಷೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದೆ.

4. ನಾನು ಕೂಡ ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರಕ್ಕೆ ಹೋಗಿ ಶವಗಳನ್ನು ನೋಡಿರುತ್ತೇನೆ.

5. ಸ್ಥಳದಲ್ಲಿದ್ದ ನನ್ನನ್ನು ಪೊಲೀಸರು ಶವಾಗಾರಕ್ಕೆ ಕರೆದಿದ್ದಾರೆ . ಅಲ್ಲಿ ನಾನು ಗೋವಿಂದನ ಶವವನ್ನು ನೋಡಿರುತ್ತೇನೆ. ಆ ರೀತಿ ಶವದ ಪರಿಶೀಲನೆ ಮಾಡುವಾಗ ಸ್ಥಳದಲ್ಲಿ ನಾನು , ಸತೀಶ್, ಅಪ್ಪು ಮತ್ತು ಗಂಗಬಾಯಿ ಶವಾಗಾರದಲ್ಲಿದ್ದೆವು.

6. ಆ ರೀತಿ ಗೋವಿಂದನ ಶವವನ್ನು ಪರಿಶೀಲನೆ

ಮಾಡುವಾಗ ಆತನ ಅಜ್ಜಿ ಕಕ್ಕೂ ಬಾಯಿ ಮತ್ತು ಸಾಕ್ಷಿ ವಿಷಕಂಠ ಕೂಡ ಶವಾಗಾರದಲ್ಲಿದ್ದರು .

7. ನಾನು ನೋಡಿದಾಗ ಸದರಿ ಗೋವಿಂದನ ಶವದ ತುಟಿ , ಬಲಗಣ್ಣಿನ ಮೇಲ್ಭಾಗ ಮತ್ತು ತಲೆಯ ಹಿಂಭಾಗದಲ್ಲಿ ಗಾಯಗಳು ಕಂಡುಬಂದವು.

8.ಆತನ ಶವದ ಮೇಲೆ ಟೀ ಶರ್ಟ್ , ನೈಟ್ ಪ್ಯಾಂಟ್ ಮತ್ತು ಅಂಡರ್ ವೇರ್ ಇತ್ತು.

9. ಯಾವುದೋ ಒಂದು ಗಟ್ಟಿಯಾದ ಆಯುಧದಿಂದ ಹೊಡೆದು ಗೋವಿಂದನನ್ನು ಸಾಯಿಸಲಾಗಿದೆ ಎಂದು ನಾವು ಅಭಿಪ್ರಾಯವನ್ನು ಪಟ್ಟಿದ್ದೇವೆ .

10. ಆ ರೀತಿ ಪೊಲೀಸರು ಬಂದು ಗೋವಿಂದನ ಶವವನ್ನು ಪರಿಶೀಲನೆ ಮಾಡಿದ ಸಂದರ್ಭದಲ್ಲಿ ನಾನು ಆ ಪ್ರಕ್ರೀಯೇಯನ್ನು ಸಾಕ್ಷೀಕರಿಸಿ ಆಗ ಮಾಡಲಾದ ದಾಖಲೆಗೆ ರುಜು ಮಾಡಿರುತ್ತೇನೆ.

11. ಈಗ ನೋಡಿದ ದಾಖಲೆಯಲ್ಲಿ ನನ್ನ ರುಜು ಇದೆ. ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ 37 ಮತ್ತು

ಸಾಕ್ಷಿಯ ರುಜುವನ್ನು 37 ಎ ಎಂದು ಗುರುತಿಸಲಾಯಿತು.

12. ಆ ರೀತಿ ನಿಪಿ 37ರ ಪಂಚನಾಮೆ ಮಾಡುವ ಸಂದರ್ಭದಲ್ಲಿ ಪೊಲೀಸರು 4 ಫೋಟೋಗಳನ್ನು ತೆಗೆದಿರುತ್ತಾರೆ ಮತ್ತು ಅವುಗಳನ್ನು ಈಗ ನೋಡಿದೆ. ಸಾಕ್ಷಿಯು ಗುರುತಿಸಿದ ನಾಲ್ಕು ಫೋಟೋಗಳನ್ನು ನಿಪಿ 38 ಎಂದು ಗುರುತಿಸಲಾಯಿತು.

13.ನಿಪಿ.38ರ ಫೋಟೋ ಸಂಃ 1 ಮತ್ತು 3ರಲ್ಲಿ ಎಡದಿಂದ ಮೊದಲನೆಯ ವ್ಯಕ್ತಿ ನಾನು.

14. ಗೋವಿಂದನ ಶವದ ಮೇಲಿದ್ದ ಹಳದಿ ಬಣ್ಣದ ಟೀಶರ್ಟ್ , ನೀಲಿ ಬಣ್ಣದ ನೈಟ್ ಪ್ಯಾಂಟ್ ಮತ್ತು ನೀಲಿ ಬಣ್ಣದ ಅಂಡರ್ ವೇರ್ ಅನ್ನು ಈಗ ನೋಡಿದೆ. ಸದರಿ ಬಟ್ಟೆಗಳನ್ನು ಅನುಕ್ರಮವಾಗಿ ಮು.ಮಾ 25 ರಿಂದ 27 ಎಂದು ನಿಶಾನೆ ಮಾಡಲಾಯಿತು.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ</u>
<u>ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

15. ಆ ರೀತಿ ಗಂಗಾರಾಮುವಿನ ಮನೆಯಿಂದ ಬೆಳಗ್ಗೆ 9ಗಂಟೆಗೆ ನನಗೆ ಶಬ್ದ ಕೇಳಿಸಿದೆ. ಆ ತಕ್ಷಣ ನಾನು

ಗಂಗಾರಾಮುನ ಮನೆಗೆ ಹೋಗಿದ್ದೇನೆ. ನನ್ನ ಮನೆ ಮತ್ತು ಗಂಗಾರಾಮುನ ಮನೆಯ ಹಿಂಭಾಗ ಒಂದಕ್ಕೊಂದು ತಾಗಿಕೊಂಡಿವೆ. ಆದರೆ ಗಂಗಾರಾಮುವಿನ ಮನೆಯ ಪ್ರವೇಶ ದ್ವಾರ ಪಕ್ಕದ ಸಂದಿಯಲ್ಲಿದೆ.

16. ಕೆ ಆರ್ ಎಸ್ ಡ್ಯಾಂ ನ ನೀರಿನ ಶಬ್ದ ನನಗೆ ಕೇಳಿಸುತ್ತದೆ .

17. ಗಂಗಾರಾಮುನ ಮನೆಯಲ್ಲಿ ಆಗುವ ಶಬ್ದಗಳು ನನ್ನ ಮನೆಗೆ ಕೇಳಿಸುವುದಿಲ್ಲ. ಸಾಕ್ಷಿ ಸ್ವತಃ ಗಂಗಾರಾಮುವಿನ ಮನೆಗೆ ಹೋದವರು ಕಿರುಚಿಕೊಂಡಾಗ ನನಗೆ ಶಬ್ದ ಕೇಳಿಸಿದೆ ಎಂದು ಉತ್ತರಿಸಿದ್ದಾರೆ. ನಾನು ನೋಡಿದಾಗ ಮಕ್ಕಳನ್ನು ಸಾಯಿಸಿ ಬೆಡ್ ಶೀಟ್ ನ್ನು ಮುಚ್ಚಿಹಾಕಿದ್ದರು. ಮನೆಯಲ್ಲಿದ್ದ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿದ್ದವೇ ಎಂದು ನಾನು ನೋಡಿಲ್ಲ. ನಾಲ್ಕು ಮಕ್ಕಳ ಕೊಲೆಯಾಗಿತ್ತು ನಾನು ಅದನ್ನು ಗಮನಿಸಿಲ್ಲ.

18.ಕೆ ಆರ್ ಆಸ್ಪತ್ರೆಯ ಶವಾಗಾರಕ್ಕೆ ನಾನು ಮದ್ಯಾಹ್ನ 2 ಗಂಟೆಗೆ ಹೋಗಿದ್ದೇನೆ. ನಿಪಿ 37 ರಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

ನನ್ನ ಜೊತೆಯಲ್ಲಿ ಗಂಗಮ್ಮ ಮತ್ತು ಸತೀಶ್ ಕೂಡ ರುಜುಗಳನ್ನು ಮಾಡಿದ್ದಾರೆ .

19. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಅಪ್ಪು ನನ್ನ ಸಂಬಂಧಿಕ, ಆತನ ತಂದೆಯ ಹೆಸರು ಮೋಹನ್.

20. ಮಹಜರು ಮಾಡುತ್ತಿದ್ದೇವೆ, ಸಾಕ್ಷಿ ಬರೆಯುತ್ತಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ , ಆದರೆ ಆ ದಾಖಲೆಯಲ್ಲಿ ಬರೆದ ವಿಚಾರವನ್ನು ನಾನು ತಿಳಿದುಕೊಂಡಿಲ್ಲ.

21. ಕಕ್ಕೂಬಾಯಿ ಮತ್ತು ವಿಷಕಂಠರವರು ಯಾವ ವಿಚಾರವನ್ನು ಪೊಲೀಸರಿಗೆ ತಿಳಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಮೃತಪಟ್ಟ ವ್ಯಕ್ತಿಗಳು ಮತ್ತು ಪ್ರಕರಣದ ಸಾಕ್ಷಿದಾರರು ನನ್ನ ಸಂಬಂಧಿಕರು ಎನ್ನುವುದು ಸರಿ . ಮೃತಪಟ್ಟ ವ್ಯಕ್ತಿ ನನಗೆ ಸಂಬಂಧಿಕನಾದ್ದರಿಂದ ಪೊಲೀಸರು ಹೇಳಿಕೊಟ್ಟ ರೀತಿಯಲ್ಲಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ 37ರ ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ತಿಳಿದುಕೊಳ್ಳದೇ ರುಜು ಮಾಡಿದ್ದೇನೆ ಎನ್ನುವುದ ಸರಿ .

22.ನಿಪಿ 38ರ ಫೋಟೋಗಳನ್ನು ಪೊಲೀಸರು ಕ್ಯಾಮೆರಾದಲ್ಲಿ ತೆಗೆದಿರುತ್ತಾರೆ .

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)